ಮರಳುವಾಗ ಚುರುಗುಡುವ ಬೆರಳು ಚೆನ್ನಾಗಿಯೇ ಕಚ್ಚಿದೆ ಎಂಬ ಸೂಚನೆ ನೀಡಿತು. ಆದರೂ ಆ ನೋವು ಅದೇನೋ ಹಿತವಾಗಿದೆ ಅನಿಸಿತು.

ಬರುವಷ್ಟರಲ್ಲಿ ಬೆಂಚಿನ ಮೇಲೆ ಯುವ ಜೋಡಿಯೊಂದು ಬಂದು ಕೂತಿತ್ತು. ಅವರು ಅದೆಷ್ಟು ಮೈಮರೆತಿದ್ದರೆಂದರೆ ಇವನು ಬಂದದ್ದೂ ಅವರ ಗಮನಕ್ಕೆ ಬರಲಿಲ್ಲ. ನಸು ಬೆಳಕಿನಲ್ಲಿ ಶಾಂತಾರಾಮನಿಗೆ ತಾನು ಮತ್ತು ಕುಸುಮಳೇ ಕೂತಿರುವಂತೆ ಅನಿಸಿತು. ಈಗ ಕುಸುಮ ತನ್ನ ಮುಖವನ್ನು ಬೊಗಸೆಗಳಿಂದ ಹಿಡಿದಂತೆ ತುಟಿಗಳನ್ನು ಕಚ್ಚಿದಂತೆ ಕಲ್ಪಿಸಿಕೊಂಡ. ಏನಾಶ್ಚರ್ಯ! ಆ ಹುಡುಗಿಯೂ ಥೇಟ್ ಹಾಗೇ ಮಾಡಿದಳು! ಮುಂದಿನ ಕಲ್ಪನೆಗಳ ಸಾಕ್ಷಾತ್ಕಾರಕ್ಕೆ ತಾನು ಸಾಕ್ಷಿಯಾಗುವುದು ಸರಿಯಲ್ಲ ಎಂಬ ವಿವೇಕವೊಂದು ಜಾಗ್ರತಗೊಂಡು ಅಲ್ಲಿಂದ ಹಗುರ ಚಲಿಸಿ ಪ್ಲಾಟ್‌ಫಾರ್ಮಿನ ಜನಜಂಗುಳಿಯ ತುದಿಯತ್ತ ನಡೆದವನು ಇನ್ನೊಮ್ಮೆ ಹಿಂತಿರುಗಿ ನೋಡಿದ. ವಿರಹದಲ್ಲಿ ಸೊರಗಿದ್ದ ಬೆಂಚು ಮತ್ತೆ ಪ್ರೀತಿಸ್ಪರ್ಶದಿಂದ ಬೆಳಗುತ್ತಿತ್ತು!

★★★

ಮೆಗಾಬ್ಲಾಕುಗಳು ಕಿರುಬ್ಲಾಕುಗಳ ನಡುವೆಯೂ ಮಾನಸರೋವರ ಸ್ಟೇಶನ್ನಿನಲ್ಲಿ ಎಂದಿನಂತೆ ನೂರಾರು ಲೋಕಲ್ಲುಗಳು ನಿರ್ವಿಕಾರವಾಗಿ ಚಲಿಸಿ ಸಾವಿರಾರು ಜನರ ಬದುಕನ್ನು ಚಲನೆಯಲ್ಲಿಡುವುದು ಮುಂದುವರಿದಿತ್ತು. ಶಾಂತಾರಾಮನಿಗೆ ಟ್ರೇನಿನಿಂದ ಇಳಿದವನೆ ಎಲ್ಲರಂತೆ ಏಕಮುಖ ಚಲನೆಯಲ್ಲಿ ಮುನ್ನಡೆಯುವುದು ರೂಢಿಯಾಗಿತ್ತು. ಚಿತ್ತದಲ್ಲಿ ಸ್ಥಾಯಿಯಾಗುಳಿದ ಮಾನಸರೋವರದ ಬೆಂಚಿನ ಮೇಲಿನ ಯುವಪ್ರೇಮಿಗಳ ಸುತ್ತ ಹ್ಯಾಪಿ ಎಂಡಿಂಗ್ ಪ್ರೇಮ ಕತೆ ಬರೆಯಲು ಶುರುಮಾಡಿದ್ದ. ಈ ನಡುವೆ ವಿರಹದುರಿಯ ಕವನಗಳಲ್ಲೂ ಅಂತಿಮ ನಿಲುವು ಬದುಕಿಗೆ ವಿಮುಖವಾಗದಂತೆ ಎಚ್ಚರಿಕೆ ವಹಿಸಿದ್ದ. ಸಂಕೀರ್ಣ ಮನಸ್ಸಿನ ಅನಾವರಣದಲ್ಲಿ ಪ್ರೀತಿ, ಪ್ರೇಮ ,ವಿರಹ, ವಿದಾಯಗಳಿಗೆ ಘನತೆಯ ಧ್ವನಿಯನ್ನೇ ಪ್ರಜ್ಞಾಪೂರ್ವಕವಾಗಿ ಆಯ್ದುಕೊಂಡಿದ್ದ.

ಆ ದಿನ ಅವನು ಮಾನಸದಲ್ಲಿಳಿದಾಗ ಹೊತ್ತು ಇನ್ನೂ ಮೇಲಿತ್ತು. ಕಥೆಯ ಗುಂಗಿನಲ್ಲಿದ್ದವನ ಹೆಜ್ಜೆಗಳು ವಿರುದ್ಧ ದಿಕ್ಕಿನಲ್ಲಿ ಚಲಿಸಿ ಹಳೆಯ ಬೆಂಚಿನತ್ತ ಒಯ್ದದ್ದು ಗೊತ್ತೇ ಆಗಲಿಲ್ಲ. ಆ ಚಲನೆ ಅದೆಷ್ಟು ಅಪ್ರಜ್ಞಾಪೂರ್ವಕವಾಗಿತ್ತು. ಅಂದರೆ, ಅಲ್ಲಿ ತಲುಪಿದಾಗ 'ಅರೆ!' ಎಂದು ಚಕಿತಗೊಂಡಿದ್ದ. ಸರಿ, ಬಂದಾಗಿದೆ, ಬೆಂಚೂ ಖಾಲಿಯಿದೆ, ಸ್ವಲ್ಪಹೊತ್ತು ಕೂಡ್ರೋಣ ಎನಿಸಿ ಅಲ್ಲೇ ಕೂತದ್ದೂ ಆಯಿತು. ತನ್ನ ವ್ಯಕ್ತಿತ್ವದ ಭಾಗವೇ ಆಗಿದ್ದ ಬೆಂಚು ಈಗ ಪರಕೀಯ ಭಾವವನ್ನು ಉಂಟುಮಾಡುತ್ತಿತ್ತು. ಯುವಪ್ರೇಮಿಗಳು ಆಗಮಿಸುವ ಮೊದಲು ಒಂದಿಷ್ಟು ಹೊತ್ತು ಇದ್ದು ಹೋದರಾಯಿತು ಎಂದುಕೊಂಡ. ಭರತಕ್ಕೆ ಖಾಡಿಯಲ್ಲಿ ನೀರು ಏರಿ ಹತ್ತಿರದ ಕಾಂಡ್ಲಾ ಪೊದೆಯಲ್ಲಿ ತೆರೆಗಳು ತುಳುಕಾಡುವುದು ಕೇಳುತ್ತಿತ್ತು. ಹೌದೋ ಅಲ್ಲವೋ ಎನ್ನುವ ಹೆಜ್ಜೆ ಸದ್ದು ಕೇಳಿಸಿದಂತಾಗಿ ತಿರುಗಿದರೆ ಅದೇ ಹುಡುಗಿ! ತೀರ ಹತ್ತಿರದಲ್ಲೆ ಬಂದು ನಿಂತಿದ್ದಾಳೆ. ಹುಡುಗ ಇನ್ನೇನು ಬರಬಹುದು, ಇದು ಪ್ರೇಮಿಗಳ ಬೆಂಚು ಆದರೇನೆ ಚಂದ, ವಿರಹಿಗಳದ್ದಲ್ಲ ಎಂದು ಮನಸಲ್ಲೇ ನಕ್ಕು ಎದ್ದು ನಿಂತ. ಹುಡುಗಿ "ಸರ್ ಕೂಡ್ರೀ ಪ್ಲೀಸ್" ಎನ್ನುತ್ತಾ ತಾನೂ ಅಲ್ಲಿ ಬಂದು ಕೂತಳು.

"ಸರ್, ನನ್ನೆಸರು ಜಾಸ್ಮಿನ್... ನಮ್ಮೂರು ವಿಜಾಪುರ... ಆ ದಿನ ನಿಮ್ಮ ಸೀಟಲ್ಲಿ ನಾವ್ ಕೂತ್ಬಿಟ್ಟು ನೀವು ಎದ್ದೋಗುವಂತೆ ಮಾಡಿದ್ವಿ... ನೀವು ಯಾರಿಗೋ ಕಾಯ್ತಿದ್ರೋ ಏನೋ!" ಎಂದು ಮಾತು ನಿಲ್ಲಿಸಿದಳು. ಶಾಂತಾರಾಮ ಪ್ಲಾಟ್‌ಫಾರ್ಮಿನ ಇನ್ನೊಂದು ತುದಿಯತ್ತ